ಕನ್ನಡಕ್ಕೆ ಒಂದು ಕಟ್ಟು

೧.ಸಾಮಾನ್ಯ ವಿಧಿಗಳು

೧. ಈಗಿನ ಕಾಲದಲ್ಲಿ ವಿದ್ಯಾವಂತರಾದವರು ಇಂಗ್ಲಿಷ್ ವಿದ್ಯೆಯಿಂದ ತಾವು ಪಡೆದ ಉತ್ತಮ ಜ್ಞಾನವನ್ನು ಕೂಡಿದಮಟ್ಟಿಗೆ ಸಾಮಾನ್ಯ ಜನರೂ ತಿಳಿದುಕೊಳ್ಳುವ ಹಾಗೆ ಅವರು ಆಡುವ ಭಾಷೆಯಲ್ಲೇ ಹರಡುವುದಕ್ಕೆ ಶಕ್ತರಾಗಿರಬೇಕಾದದ್ದು ನಮ್ಮ ದೇಶದ ಏಳಿಗೆಗೆ ಅವಶ್ಯಕವಾದ ಸೌಕರ್ಯಗಳಲ್ಲಿ ಒಂದಾಗಿದೆ. ಇದಕ್ಕಾಗಿ ಯಾವುದಾದರೂ ವಿಹಿತವಾದ ಮಾರ್ಗದಲ್ಲಿ ಒಂದು ಕಟ್ಟು ಮಾಡಿಕೊಂಡು ವಿದ್ಯಾರ್ಥಿಗಳಿಗೆ ದೇಶಭಾಷೆಯನ್ನು ಬರೆಯುವುದನ್ನು ಕಲಿಸಿಕೊಡಬೇಕು.

೨. ಆ ವಿಹಿತವಾದ ಮಾರ್ಗ ಯಾವುದು? ರೂಢಿಯಲ್ಲಿರುವ ಭಾಷೆಯನ್ನು ಕ್ರಮಪಡಿಸಿಕೊಳ್ಳುವುದೇ ಅಲ್ಲವೇ? ಕೆಲವರ ಮನಸ್ಸಿನಲ್ಲಿ ಭಾಷೆ ಎನ್ನುವುದು ಓಲೆಗರಿಯಿಂದ ಹೊರಟು ಅಚ್ಚಿನ ಮೊಳೆಯ ಮೂಲಕ ಇಳಿದುಬರುವಂತೆ ಕಾಣುತ್ತದೆ; ಇವರಿಗೆ ಪುಸ್ತಕದಲ್ಲಿ ಕಣ್ಣಿಗೆ ತೋರುವ ಭಾಷೆ ಅಂದರೆ ಗೌರವ; ಜನರ ಬಾಯಿಂದ ಕಿವಿಗೆ ಬೀಳುವ ಭಾಷೆ ಅಂದರೆ ಧಿಕ್ಕಾರ. ಅದರೂ ಬರೆಯುವ ಭಾಷೆಗೆ ಆಡುವ ಭಾಷೆಯೇ ಜನ್ಮಸ್ಥಾನ. ಕಾವ್ಯವನ್ನು ಮೊದಲು ಬರೆದವನು ಆಡುವ ಭಾಷೆಯಲ್ಲಿ ತಾನೇ ಬರೆದಿರಬೇಕು? ಇವತ್ತಿನವರೆಗೆ ಕನ್ನಡ ಪುಸ್ತಕವೇ ಇಲ್ಲದಿದ್ದರೆ, ಈಗ ಮೊದಲು ಬರೆಯತಕ್ಕವನೂ ಹಾಗೆತಾನೇ ಮಾಡಬೇಕು? ಹಿಂದಿನ ಭಾಷೆ ಆಗಿನ ಜನಕ್ಕೆ ತಿಳಿಯುತ್ತಿತ್ತು; ಈಗಿನ ಜನಕ್ಕೆ ತಿಳಿಯುವುದಿಲ್ಲ; ಅದರ ವ್ಯಾಕರಣ ಕಷ್ಟ; ಇದಲ್ಲದೆಯೋ, ಅದರ ಶಬ್ದಕೋಶ ಈಗಿನ ಅಭಿಪ್ರಾಯಗಳನ್ನೆಲ್ಲಾ ಹೇಳಲಾರದು. ಆದರೂ ಬಹುಕಾಲದಿಂದಲೂ ಬರೆದು ಬರೆದು ಒಂದು ಕ್ರಮಕ್ಕೆ ಬಂದಿರುವ ಗ್ರಂಥಭಾಷೆ ಇರುವಾಗ, ಈಗಿನ ಗ್ರಂಥಕರ್ತರು ಅದನ್ನು ಧಿಕ್ಕಾರ ಮಾಡುವುದಕ್ಕೂ ಆಗುವುದಿಲ್ಲ. ಅದರ ಮೇಲೂ ದೃಷ್ಟಿ ಇರಲಿ; ಹೊಸ ಭಾಷೆಯ ಅಕ್ರಮ, ಅಪರೂಪವನ್ನೆಲ್ಲಾ ಅದರ ಮೇಲಿನ ಗಮನದಿಂದ ಒಂದು ಕ್ರಮಕ್ಕೆ ತರೋಣ. ಈಗಿನ ಆಡುವ ಭಾಷೆಯಲ್ಲಿ ಕ್ರಮವಿಲ್ಲ, ಏಕರೂಪವಿಲ್ಲ; ಪ್ರಾಂತ್ಯಭೇದವಿದೆ, ಮಿಶ್ರವಿದೆ, ಗ್ರಾಮ್ಯವಿದೆ. ಅರ್ಥ, ಕ್ರಮ ಎರಡೂ ಬೇಕಾದರೂ, ಅರ್ಥ ಮುಂದು, ಕ್ರಮ ಹಿಂದು; ಆದದ್ದರಿಂದ ಅರ್ಥವಾಗುವ ಹೊಸ ಭಾಷೆಯನ್ನೇ ಹಿಡಿದು ಕ್ರಮಕ್ಕೆ ಬರುವಂತೆ ತಪ್ಪು ಭಾಗವನ್ನೆಲ್ಲಾ ಶೋಧಿಸೋಣ. ಎರಡು ಭಾಷೆಗೂ ಮಧ್ಯಮಾರ್ಗವನ್ನೂ ಹಿಡಿದರೆ ಇದು ಸಾಧ್ಯವಾಗುತ್ತದೆ. ಹೊಸಗನ್ನಡದಲ್ಲಿ ವಚನ ಗ್ರಂಥವನ್ನು ಬರೆಯುವುದಕ್ಕೆ, ಸತ್ತ ಕವಿಗಳೂ ಶಾಸನಕಾರರೂ ಬಲವಾಗಿ ಹಿಡಿದಿರುವ ಮುಷ್ಟಿಯಿಂದ ಭಾಷೆಯನ್ನು ಸಡಿಲಿಸಿ, ಬದುಕಿರತಕ್ಕವರ ಬಾಯಿಯಲ್ಲಿ ಸ್ವತಂತ್ರವಾಗಿ ಉಸಿರಾಡಿ ಜೀವಕಳೆ ತುಂಬಿಕೊಳ್ಳುವಂತೆ ಮಾಡಬೇಕು. ಆದರ ಭಾಷೆಯನ್ನು ಸುಲಭಮಾಡುತ್ತೇನೆಂದು, ಅಬದ್ಧ ಮಾಡಬಾರದು; ಗ್ರಾಮ್ಯವನ್ನು ದೂರವೇ ನಿಲ್ಲಿಸಿ, ಭಾಷೆ ಶುದ್ದವಾಗಿ, ಬಿಗಿಯೂ ಕಟ್ಟೂ ಇರುವಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

೩. ಈ ಮಧ್ಯಮಾರ್ಗ ಏನೆನ್ನುವುದು ಮಂದಟ್ಟಾದರೆ ಒಳ್ಳೆಯದು. ಪೂರ್ವದಿಂದ ಇದುವರೆಗೆ ಬಂದಿರುವ ಭಾಷೆಯ ಶಬ್ದಗಳನ್ನೂ, ಶಬ್ದರೂಪಗಳನ್ನೂ ನೋಡಿದರೆ, ಮೂರು ಬಗೆಯಾಗಿ ಕಾಣುತ್ತವೆ.

(೧) ಪೂರ್ವದ ರೂಪ: ಪುಸ್ತಕಗಳಲ್ಲಿ ಇರತಕ್ಕದ್ದು; ಹಳಗನ್ನಡ; ಹೊಸಗನ್ನಡವಾದರೂ, ಹೆಚ್ಚುಕಡಿಮೆ ಹಿಂದಿನ ವ್ಯಾಕರಣಕ್ಕೇ ಸರಿಹೋಗತಕ್ಕದ್ದು.

(೨) ರೂಢಿಯ ರೂಪ: ಈಗಿನ ಜನರೆಲ್ಲಾ ಆಡತಕ್ಕದ್ದು; ಕೆಲವು ವೇಳೆ ಪೂರ್ವದ ರೂಪಕ್ಕೆ ಸಮವಾಗಿರುತ್ತದೆ; ಮಿಕ್ಕ ವೇಳೆ, ವಿಧಿಗೆ ಬದ್ಧವಾಗಿ ಹೊಸ ಸೂತ್ರಗಳಲ್ಲಿ ಅಡಕವಾಗುತ್ತದೆ.

(೩) ಗ್ರಾಮ್ಯರೂಪ: ಜನರೆಲ್ಲಾ ಆಡಿದರೂ ವಿಧಿಯನ್ನು ಮೀರಿದ್ದು; ಕಡಿಮೆ ತಿಳಿವಳಿಕೆ, ಅವಸರ, ಅಸಡ್ಡೆಗಳಿಂದ ಅರೂಪವಾದದ್ದು; ಇಲ್ಲ, ಕೆಲವು ಪ್ರಾಂತ್ಯಗಳಲ್ಲಿ ಮಾತ್ರ, ಉತ್ತಮ ಜಾತಿಯವರಲ್ಲಿ ಕೆಲವರು ಮಾತ್ರ, ಕೀಳುಜಾತಿಯವರು ಮಾತ್ರ, ಆಡತಕ್ಕದ್ದು.

ಕೆಲವು ಉದಾಹಣೆಗಳಿಂದ ಈ ಭೇದ ಸ್ಪಷ್ಟವಾಗುತ್ತದೆ:

ಪೂರ್ವದ ರೂಪ: ಅದರಿಂದೆ, ಎನಗೆ, ಅಣ್ಣಂಗೆ, ಮಾಡುತ್ತೆ, ನಡೆವ, ಕಾಣದುದು, ಇರುವುದು, ಬರುವೆ, ನಡೆದುದು.

ಪೂರ್ವಕ್ಕೂ, ರೂಢಿಗೂ, ಸಮರೂಪ: ಬಂದ, ಕೊಟ್ಟ, ಮಾಡುವ, ಹೇಳುವ, ನೋಡಿದ, ಕೇಳಿದ, ಹೋಗಿ, ಬೇಡಿ, ಹೊಡೆದು, ಮುರಿದು, ಮರಕ್ಕೆ, ಮರದ, ಮರದಲ್ಲಿ, ಬಂದೆವು.

ರೂಢಿಯ ರೂಪ: ಅದರಿಂದ, ನನಗೆ, ಅಣ್ಣನಿಗೆ, ಮಾಡುತ್ತ, ನಡೆಯುವ, ಕಾಣದ್ದು, ಇರುತ್ತದೆ, ಇದೆ, ಬರುತ್ತಿಯೇ, ನಡೆದದ್ದು.

ರೂಢಿಗೂ, ಗ್ರಾಮ್ಯಕ್ಕೂ, ಸಮರೂಪ: ಇತ್ತು, ಒದ್ದಾಡು, ಕುದ್ದುಕೊ, ಅನ್ನು, ಅಂತ, ಅಂದರೆ, ಯಾರು, ಯಾತಕ್ಕೆ, ಬಗ್ಗೆ, ಆಗ್ಗೆ, ಬೆಳಗ್ಗೆ, ಕೂತುಕೊ, ಕೂರಿಸು, ಆರಿಸು, ಎಳೆತಂದು, ಬಳಿಕೊಂಡು, ನೋಯಿತು, ಬೇಯಿತು, ಬಂತು.

ಗ್ರಾಮ್ಯರೂಪ: ನಂಗೆ, ಅಣ್ಣಗೆ, ಮಾಡ್ತ, ನಡೆಯೋ, ಬರೋಕ್ಕೆ, ಬರುತ್ಲು, ಬಂದ್ಲು, ಮನೇಲಿ, ಬರ್‍ತೀ, ಒಳ್ಳೇದು, ಕಟ್ಲೆ, ಮುಣುಕು, ಕಳ್ಳೆ, ಇರುತ್ತೆ, ಆಯ್ತೆ, ಬಂದೊ, ಬಿಡಲಿಕ್ಕೆ, ಸಿಗು, ನಡದ್ದು, ಹೋದ್ದು, ಇವ್ನಿ.

ಹೀಗೆ ಇರತಕ್ಕ ನಾನಾರೂಪಗಳಲ್ಲಿ ಮಧ್ಯಮಾರ್ಗವೇನೆಂದರೆ, ಅಂತ್ಯದಲ್ಲಿರುವ ಪೂರ್ವರೂಪ, ಗ್ರಾಮ್ಯರೂಪಗಳನ್ನು ಬಿಟ್ಟು, ಮಧ್ಯದಲ್ಲಿರುವ ರೂಢಿಯ ರೂಪ, ಸಮರೂಪಗಳನ್ನು ತೆಗೆದುಕೊಳ್ಳುವುದು. ಪೂರ್ವರೂಪ ಶುದ್ಧವಾದರೂ ಬಿಟ್ಟು, ರೂಢಿಗೂ ಗ್ರಾಮ್ಯಕ್ಕೂ ಸಮವಾದ ರೂಪವನ್ನೇ ಹಿಡಿಯುವುದಕ್ಕೆ ಕಾರಣವೇನೆಂದರೆ–ಭಾಷೆಯ ಉಚ್ಚಾರಣೆ ಕೆಲವು ನಿಯಮಗಳನ್ನು ಅನುಸರಿಸಿ ವ್ಯತ್ಯಾಸವಾಗುತ್ತ ಹೋಗುತ್ತದೆ; ಹೀಗೆ ಬಲುಮಟ್ಟಿಗೆ ತೇದುಹೋದ ರೂಪವನ್ನೇ ಜನವೆಲ್ಲಾ ಆಡುತ್ತಿರುವಾಗ, ಪೂರ್ವರೂಪವನ್ನು ಬರೆದರೆ ಏನೋ ವಿಕರವಾಗಿಯೂ ಅತಿ ಪಾಂಡಿತ್ಯವಾಗಿಯೂ ಕಾಣುತ್ತದೆ. ಇತ್ತು–ಇದ್ದಿತು; ಬಿತ್ತು–ಬಿದ್ದಿತು; ಬೆಂತು, ಬೇಯಿತು–ಬೆಂದಿತು; ಕುದ್ದುಕೊ–ಕುದಿದುಕೊಳ್ಳು; ಇವನ್ನು ಹೋಲಿಸಬಹುದು. (ಹಳಗನ್ನಡದಲ್ಲಿ ಕೂಡ ಕೆಲವು ರೂಢಿರೂಪಗಳು ಗ್ರಾಮ್ಯವಾದರೂ ಸೇರಿವೆ; ಶುದ್ಧ–ಅದುದು, ಪೋದುದು, ಅವನ್, ಬಂದನ್, ಬಿಸುಡಲ್ಕೆ, ಅಗಲ್, ಅಟ್ಟಿನಿಲ್ತು, ಬಟ್ಟುಕು; ರೂಢಿ–ಆಯ್ತು, ಪೋಯ್ತು, ಅವೊನ್, ಬಂದೊನ್, ಬಿಸುಡಲಿಕ್ಕೆ, ಆಗಲು, ಅರ್ತಿ, ನಿಂದು, ಬರ್ದುಕು.)

೪. ಇದನ್ನೆಲ್ಲಾ ಒಪ್ಪುವುದಾದರೆ, ಭಾಷೆಯನ್ನು ಈ ರೀತಿ ಸುಲಭಮಾಡಬಹುದಾಗಿ ತೋರುತ್ತದೆ:– ರೂಢಿಭಾಷೆಯನ್ನೇ ಆಧಾರವಾಗಿಟ್ಟುಕೊಳ್ಳುವುದು; ಬಿಟ್ಟುಹೋದ ಪೂರ್ವದ ರೂಪಗಳನ್ನು ಸಾಧ್ಯವಾದಮಟ್ಟಿಗೆ ಬಿಟ್ಟುಬಿಡುವುದು; ಇನ್ನೂ ಬಳಕೆಯಲ್ಲಿರುವ ರೂಪಗಳನ್ನು ಉಪಯೋಗಿಸುವುದು; ಹಿಂದೆ ಇಲ್ಲದಿದ್ದರೂ ಈಚೆಗೆ ಹೊಸದಾಗಿ ಹುಟ್ಟಿರುವುಗಳಲ್ಲಿ, ಉತ್ತಮರಾಡುವ, ಎಲ್ಲಾ ಕಡೆಯೂ ಸಾಮಾನ್ಯವಾದ, ವಿಧಿಬದ್ಧವಾದ ರೂಪಗಳನ್ನು ಸೇರಿಸಿಕೊಳ್ಳುವುದು; ಅತಿಪಾಂಡಿತ್ಯವನ್ನು ಬಿಡುವುದಕ್ಕೆಷ್ಟೋ ಅಷ್ಟು ಹೊರತು, ಮಿಕ್ಕ ಭಾಗದಲ್ಲಿ ಗ್ರಾಮ್ಯವನ್ನೂ, ಸ್ವೇಚ್ಛಾಪ್ರವೃತ್ತಿಯನ್ನೂ ಒಪ್ಪಿಕೊಳ್ಳದೆ ತಡೆಯುವುದು. ಮುಖ್ಯ, ವಿದ್ಯಾರ್ಥಿಗಳು ಸಾಧಾರಣವಾಗಿ ಗ್ರಾಮ್ಯವನ್ನೂ ಪಾಂಡಿತ್ಯವನ್ನೂ ತಿರಸ್ಕರಿಸಿ, ಯಾವಾಗಲೂ ಜನಸಾಮಾನ್ಯಕ್ಕೆ ಬರೆಯುತ್ತಿದ್ದೇವೆಂತಲೇ ಭಾವಿಸುತ್ತಾ, ಜನರು ಆಡುವ ಭಾಷೆಯ ಛಾಯೆಯನ್ನೇ ಹೆಗ್ಗುರುತಾಗಿಟ್ಟುಕೊಳ್ಳಬೇಕೆಂದು ಹೇಳಬಹುದು.

೨.ಶಬ್ದಕೋಶ

೫. ನಮ್ಮ ಅಭಿಪ್ರಾಯವನ್ನು ಮತ್ತೊಬ್ಬರಿಗೆ ಹೇಳುವುದಕ್ಕಾಗಿ ಶಬ್ದಗಳೇ ಹೊರತು, ಅವರ ಕಿವಿಯಲ್ಲಿ ಆರ್ಭಟಮಾಡುವುದಕ್ಕಲ್ಲ; ಆದದ್ದರಿಂದ ಬರೆಯುವವರು ಉಪಯೋಗಿಸಬಹುದಾದ ಶಬ್ದಗಳು ಯಾವುವು, ಉಪಯೋಗಿಸಬಾರದ ಶಬ್ದಗಳು ಯಾವುವು, ಈ ವಿಷಯದಲ್ಲಿ ಕೆಲವು ನಿಯಮಗಳನ್ನು ಮಾಡಿಕೊಳ್ಳಬೇಕು. ಇಲ್ಲಿ ಕೂಡ, ಬಿಡತಕ್ಕ ಭಾಗ ಒಂದಿದೆ, ಸೇರತಕ್ಕ ಭಾಗ ಒಂದಿದೆ.

೬. ಪೂರ್ವಕಾಲದ ಕನ್ನಡಪುಸ್ತಕಗಳಿಂದ ಸಂಗ್ರಹಿಸಬಹುದಾದ ಶಬ್ದಗಳಲ್ಲಿ ಎರಡು ಜಾತಿಯುಂಟು–ಕನ್ನಡಕ್ಕೆ ಸೇರಿದ ದೇಶ್ಯ; ಸಂಸ್ಕೃತದಿಂದ ಬೆರೆದ ತತ್ಸಮ, ತದ್ಭವಗಳು. ಸಾಮಾನ್ಯ ಜನರಿಗೆ ತಿಳಿವಳಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಬರೆಯತಕ್ಕವರು (ಕೆಲವರು ಯಾವ ಉದ್ದೇಶದಿಂದ ಬರೆಯುತ್ತಿದ್ದಾರೋ ಹೇಳುವುದು ಕಷ್ಟ), ಯಥೇಷ್ಟವಾಗಿ ಪುಷ್ಕಳವಾಗಿರುವ ಈ ಬೊಕ್ಕಸದಿಂದ ಯಾವ ಶಬ್ದಗಳನ್ನು ಮಾತ್ರ ಆರಿಸಿಕೊಳ್ಳಬೇಕದೆನ್ನುವ ವಿಷಯದಲ್ಲಿ ಗಮನವಿಡಬೇಕು. ಇಲ್ಲಿ ಕೊಡುವ ನಿಯಮಗಳು ಅವರಿಗೆ ಉಪಯೋಗವಾದಾವು.

(೧) ಬಿಟ್ಟುಹೋದ ಹಳಗನ್ನಡ ಶಬ್ದಗಳು, ಶಬ್ದರೂಪಗಳು ಆಗದು. ನಮ್ಮ ಕಾಲದ ಹೊಸಗನ್ನಡ ಪುಸ್ತಕ ಒಂದರ ಇಪ್ಪತ್ತು ಪುಟಗಳಲ್ಲಿ ಈ ರೂಪಗಳು ಇವೆ–ಪಡಿನೋಟ, ಕುಳಿರುಗೊಳ, ಮುಂಗುಡಿ, ಕಡುನೊಂದು, ಹೊಂಪುಳಿ, ಅನುವಿಲ್ಲ, ಬಣ್ಣಿಸು, ಬಂಡುಮಾಡು, ಆರು, ಅದರೊಳು, ಅವನಂ, ನಿಡುಸುಯ್ದು ನಿರುಕಿಸಿ.

ಆದರೆ ಬಿಟ್ಟು ಹೋಗುತ್ತಿರುವ ಕೆಲವು ಮಾತುಗಳನ್ನು ರೂಢಿಗನುಸಾರವಾಗಿ ಸರಿಯಾದ ಸಂದರ್ಭದಲ್ಲಿ ಉಪಯೋಗಿಸಬಹುದು: ಅರಿ, ಅರೆ, ಅಲಗು, ಆಳು(=ಮನುಷ್ಯ), ಎಡೆ, ಎರಳು, ಎಣಿಸು(=ಭಾಗಿಸು), ಒಲುಮೆ, ಒಸಗೆ, ಓಲಗ (=ಸಭೆ), ಕಡಲು, ಕಡಿವಾಣ, ಕಳಲು, ಕುರಿ (=ಉದ್ದೇಶಪಡು), ಗೆಲವು (=ಹರ್ಷ), ಜರೆ, ತೆರಳು, ನಲಿ, ನುಡಿ, ಪಡೆ,(=ಗುಂಪು), ಬಿಂಕ, ಮಿರುಗು, ಸವಿ, ಹಲವು, ಹಲುಬು, ಹೊನ್ನು, ಹಳಿ(=ನಿಂದಿಸು), ಹುಸಿ, ಹಗೆ. ಇವು ತಾವಾಗಿ ಜನರ ಬಾಯಿಗೆ ಬರದೆ ಹೋದರೂ ಕೇಳಿದ ಕೂಡಲೆ ಅರ್ಥವಾಗುತ್ತವೆ.

(೨) ಸಾಮ್ಯಭ್ರಮೆಯಿಂದ ಕಲ್ಪನೆ ಮಾಡಿದ ರೂಪಗಳು ಆಗದು: ಬರುವಿಕೆ, ಇರುವಿಕೆ, ಕೊಡಿಸುವಿಕೆ, ಹುಟ್ಟುವಿಕೆ; ವಾಸಿಸು, ದರ್ಶಿಸು, ಪ್ರಶ್ನಿಸು, ಆಶಿಸು–ಇವು ಹಿಂದೆ ಬಳಕೆಯಲ್ಲಿದ್ದುವೆಂದು ಹೇಳುವುದು ಕಷ್ಟ; ಈಗಂತೂ ಇಲ್ಲ.

(೩) ರೂಢಿಯಲ್ಲಿಲ್ಲದ ಸಂಸ್ಕೃತ ಶಬ್ದಗಳು, ಅರ್ಥಗಳು, ಆಗದು: ಅಭಿಲಷಿತ, ಅರಾತಿ, ಉಪೋದ್ಘಾತ, ಧರಿತ್ರಿ, ನಭ, ಪರಿಚ್ಛೇದ, ಪಾರಾವಾರ, ಬುಧ, ತನೂಜ, ಚಂಡಾಂಶು, ಸಂಗ್ರಾಮ, ಶಿಖಿ; ಇವಕ್ಕಿಂತ ಅಭಿಲಾಷೆ, ಶತ್ರು, ಪೀಠಿಕೆ, ಭೂಮಿ, ಆಕಾಶ, ಅಧ್ಯಾಯ, ಸಮುದ್ರ, ಪಂಡಿತ, ಕುಮಾರ, ಸೂರ್ಯ, ಯುದ್ಧ, ಅಗ್ನಿ–ಇವು ಉತ್ತಮ. ವಿಶ್ವಾಸ, ಅಹಂಕಾರ, ಯಜಮಾನ, ಆತಂಕ, ಮೊದಲಾದ ಶಬ್ದಗಳಿಗೆ ಕನ್ನಡದಲ್ಲಿ ಪ್ರಚಾರವಾದ ಅರ್ಥವೇ ಇರಬೇಕು. ವೃತ್ತದ ಹಿಂಸೆಗಾಗಿ ಕವಿಗಳು ಹೆಣೆದಿರತಕ್ಕ ಪರ್ಯಾಯ ಪದಗಳನ್ನು ಮುಖನೋಡದೆ ಕುಯ್ದು ಹಾಕಬೇಕು:–ರಾಜ, ಪ್ರಭು, ಕಮಲ, ಪದ್ಮ–ಅಭಿಪ್ರಾಯ ಹೊರಪಡುವುದಕ್ಕೆ ಇವು ಸಾಕು; ಜನರು ಉಪಯೋಗಿಸುವುವೂ ಇವೇ; ಗ್ರಂಥವನ್ನು ತೆಗೆದರೆ ಈ ಜಾಡರ ಹುಳುವಿನ ನೂಲಿಗೆ ಕೊನೆಯೇ ಇಲ್ಲ– ನೃಪ, ನೃಪತಿ, ನೃಪಾಲ, ನೃಪಾಲಕ; ನರಪ, ನರಪತಿ, ನರಪಾಲ, ನರಪಾಲಕ; ಭೂಪ, ಭೂಪತಿ, ಭೂಪಾಲ, ಭೂಪಾಲಕ; ಭೂಮಿಪ, ಭೂಮಿಪತಿ, ಭೂಮಿಪಾಲ, ಭೂಮಿಪಾಲಕ; ಹೀಗೇ ಕಮಲಕ್ಕೆ, ಅಬ್ಜ, ಅಬ್ಜಾತ; ಅಂಬುಜ, ಅಂಬುಜಾತ; ಅಂಭೋಜ, ಅಂಭೋಜಾತ; ನೀರಜ, ನೀರಜಾತ; ನೀರೇಜ, ನೀರೇಜಾತ; ವಾರಿಜ, ವಾರಿಜಾತ; ಪಯೋಜ, ಪಯೋಜಾತ;–ಸಂಸ್ಕೃತ ತಿಳಿಯದವನಿಗೆ ಇದರ ಕೊನೆ ಹತ್ತುವುದಕ್ಕೆ ಶಕ್ತಿ ಇಲ್ಲ.

(೪) ಜನರು ಬಳಸದೆ ಇರುವ ತದ್ಭವ ಆಗದು: ಅಗ್ಗ, ಆಣೆ, ಇಟ್ಟಿಗೆ, ಎದೆ, ಕೊಡಲಿ, ಗಣಿ, ಗುಡಿ, ಗಂಟು, ಗಾದೆ, ಜೋಗಿ, ದೀವಿಗೆ, ದೆಸೆ, ದೋಣಿ, ನಿದ್ದೆ, ನೊಗ, ಬಂಜೆ, ಬಣ್ಣ, ಬಸವ, ಬಾವಿ, ಬುತ್ತಿ, ಬೂದಿ, ಮುದ್ದು, ಸಂತೆ, ಸಡ್ಡೆ, ಹಕ್ಕಿ, ಹವಣು–ಇವು ಇರಲಿ; ಅಮರ್ದು, ಆಗಸ, ಉಜ್ಜುಗ, ಗೋವಳ, ಜಗ, ಜಸ, ಜವ್ವನ, ತವಸಿ, ತಾಣ, ತುತಿ, ದೇವಸ, ನಿಚ್ಚ, ಪಳಿಕು, ಬಕುತಿ, ಬರಿಸ, ಬಸಂತ, ಬಿಜ್ಜೆ, ಮೊಗ, ಸಾಸ, ಹೊತ್ತಗೆ–ಇವು ಬೇಡ. ಇವುಗಳ ಸಂಸ್ಕೃತರೂಪಗಳನ್ನೇ ಈಗ ಜನರು ಹೇಳುತ್ತಾರೆ.

(೫) ಕೇವಲ ಸಂಸ್ಕೃತ ಪಾಂಡಿತ್ಯದಿಂದಲೇ ಬರುವ ಅವ್ಯಯಗಳು, ಕ್ರಿಯಾರೂಪಗಳು, ಭಾವನಾಮಗಳು, ಜನರಿಗೆ ಪರಿಚಯವಿಲ್ಲದುವಾದರೆ, ಆಗದು: ರಮಣೀಯ, ರಮ್ಯ, ಶಕ್ಯ, ಲಭ್ಯ ಎನ್ನಬಹುದು; ಲಾಲನೀಯ, ವಂದನೀಯ, ಶೋಚನೀಯ, ಸಂಭಾವನಿಯ, ಎನ್ನಕೂಡದು; ಊರ್ಜಿತ, ಪ್ರಶಸ್ತ, ಭ್ರಷ್ಟ, ನಷ್ಟ, ಯುಕ್ತ, ಎನ್ನಬಹುದು; ಅವಮಾನಿತ, ಆಕ್ರಂದಿತ, ಉಪಯುಕ್ತ, ಉಪನ್ಯಸ್ತ, ಕೀರ್ತಿತ, ತಿರಸ್ಕೃತ, ಪರಿತ್ಯಕ್ತ, ಪೂರಿತ, ವ್ಯತ್ಯಸ್ತ, ವ್ಯಥಿತ, ವ್ಯಾಕುಲಿತ, ಎನ್ನಕೂಡದು; ಚಾತುರ್ಯ, ಸಾಮರ್ಥ್ಯ, ಐಶ್ವರ್ಯ, ಮಾಧುರ್ಯ, ಸೌಭಾಗ್ಯ, ಇವು ಆಗಬಹುದು; ಅನುಕೂಲ್ಯ, ವೈಪರೀತ್ಯ, ನೈರ್ಮಲ್ಯ, ಬಾಹುಳ್ಯ, ಇವು ಆಗದು. ಹೀಗೆಯೇ, ಬಹುಶಃ, ಪ್ರಾಯಶಃ, ಏತೇನ, ಪರಂತು, ಕತ್ವ್ಯತಃ ಮುಖೇನ–ಇವು ಆಗದು.(ಬಹುಶ, ಪ್ರಾಯಶ, ವಿನಹ, ಅಥವ–ಹೀಗೆ ಬರೆದು ಇವು ತದ್ಭವಗಳೆಂದು ಸಾಧಿಸಬಹುದೆ?) ಈ ನಿಯಮಗಳ ಉದ್ದೇಶವೇನೆಂದರೆ– ಮೇಲೆ ಹೇಳಿದಂತೆ, ಭಾಷೆಗೆ ಬಲವಾಗಲಿ ಸೊಗಸಾಗಲಿ ಬರದೆ, ಬರಿಯ ಒಣ ಪಾಂಡಿತ್ಯವನ್ನು ಮಾತ್ರ ತೋರಿಸತಕ್ಕ ಸಂಸ್ಕೃತದ ಹರದವನ್ನೆಲ್ಲಾ ಗುಡಿಸಿ ಎತ್ತಿಹಾಕುವುದೇ.

೭. ಹೀಗೆ ಶುದ್ಧಿಮಾಡಿದಮೇಲೆ, ಶಬ್ದಕೋಶ ಜನರಿಗೆ ಸುಲಭವೂ ಸ್ಪಷ್ಟವೂ ಆಗಿ, ರೂಢಿಭಾಷೆಗೆ ಅನುಕೂಲವಾಗುತ್ತದೆ. ಆದರೆ ವಿದ್ಯಾರ್ಥಿಗಳೂ ಈಗಿನ ಕಾಲದ ಗ್ರಂಥಕಾರರೂ ತಮ್ಮ ವಿದ್ಯೆಯನ್ನು ಸಂಘದಲ್ಲಿ ಹರಡುವುದಕ್ಕೆ ಒದಗುತ್ತದೆಯೋ? ಕಥೆ, ಕವಿತ್ವ ಮೊದಲಾದ ವಿಷಯಗಳಿಗೂ, ಆಚಾರ ವ್ಯವಹಾರ ವಿಷಯವಾದರೆ, ಅಥವಾ, ಮೇಲೆ ಹೇಳಿದ ವಿಷಯಗಳಲ್ಲೂ ಹೊಸ ನಾಗರಿಕತೆಯ ಅಭಿಪ್ರಾಯಗಳನ್ನೂ ಪದಾರ್ಥಗಳನ್ನೂ ತಿಳಿಸಬೇಕಾದರೆ, ಖಂಡಿತ ಸಾಕಾಗಲಾರದು. ಇದಕ್ಕೆ ಹೊಸ ಶಬ್ದಗಳನ್ನು ಸೇರಿಸಿಯೇ ತೀರಬೇಕು.

೮. ಭಾಷೆಗೆ ಈ ಹೊಸ ಶಬ್ದಗಳು ದೊರೆಯುವುದು ಹೇಗೆ? ಯಾವ ಬಗೆಯ ಹೊಸ ಶಬ್ದಗಳು ಅದಕ್ಕೆ ಬೇಕು, ಎಷ್ಟು ಬೇಕು? ಈ ಪ್ರಶ್ನೆಗಳಿಗೆ ಕೆಲವರು ಉತ್ತರವನ್ನು ಸರಾಗವಾಗಿ ಒಂದೇ ಮಾತಿನಲ್ಲಿ ಮುಗಿಸುತ್ತಾರೆ–"ಸುಮ್ಮನೆ ಬೇಕಾದುವನ್ನೆಲ್ಲಾ ಸೇರಿಸಿಕೊಳ್ಳುವುದಲ್ಲವೆ" ಎಂದು ಹೇಳಿ. ಸರಿಯೆ, ಸೇರಿಸಲೇನೋ ಬೇಕು. ಆದರೆ ಒಂದು ವಿಷಯ ಮರೆಯಬಾರದು. ಸೇರಿಸುವುದು ಯಾತಕ್ಕೆ? ಸಾಮಾನ್ಯಜನರಿಗೆ ಹೊಸ ಸಂಗತಿಗಳನ್ನು ಕಲಿಸುವುದಕ್ಕೆ. ಇಷ್ಟಕ್ಕೇ ನಿಲ್ಲದೆ ಹಿಂದೆ ಸಂಸ್ಕೃತಪಂಡಿತರು ಸುಮ್ಮನೆ ತುಂಬುತ್ತಾ ಹೋದರು; ಕೊನೆಗೆ ಜನಕ್ಕೆ ತಿಳಿಯದ ಹಾಗಾಗಿ, ಕನ್ನಡ ಮಾತು ಮುಳುಗಿಹೋಗಿ, ಹೆಚ್ಚು ನೀರು ಬಸಿದುಹೋಗುವ ಹಾಗೆ ಈಗ ಕಡಗು ಹೊಡೆಯಬೇಕಾಗಿ ಬಂದಿದೆ. ಈಗಲೂ ಸುಮ್ಮನೆ ತುಂಬುತ್ತಾಹೋದರೆ ಅದೇ ಗತಿಯಾಗುತ್ತದೆ.

ಈ ವಿಷಯ ಸ್ವಲ್ಪ ವಿಚಾರಮಾಡತಕ್ಕದ್ದು.

ಮೊದಲು, ಇತರ ಭಾಷೆಗಳಿಂದ ಶಬ್ದಗಳನ್ನು ಬೆರಸಿಕೊಳ್ಳುವುದು ಅಭಿಪ್ರಾಯವನ್ನು ಭಾಷೆ ಚೆನ್ನಾಗಿ ತಿಳಿಸುವುದಕ್ಕೆ; ಜನಮಂಡಲಿಗೆ ವಿದ್ಯಾವಂತರ ಜ್ಞಾನ ಇಳಿಯುವುದಕ್ಕೆ, ಮಿಕ್ಕ ವಿದ್ಯಾವಂತರಿಗಲ್ಲ.

ಎರಡನೆಯದು, ನಮಗೆ ಈ ಬಗೆಯ ಶಬ್ದಗಳು ಬೇಕು–

(೧) ಹೊರಗಿನ ದೇಶಗಳು, ಜನರು, ವ್ಯಾಪಾರದ ಪದಾರ್ಥಗಳು, ಕಂಡುಹಿಡಿದ ಯಂತ್ರಗಳು, ಸೌಕರ್ಯಗಳು, ಇವುಗಳ ಹೆಸರುಗಳು.

(೨) ರಾಜ್ಯಭಾರ, ನ್ಯಾಯ, ಮತ, ಸಂಘ ಇವಕ್ಕೆ ಸಂಬಂಧಪಟ್ಟ ಸಭೆಗಳು, ಕಾರ್ಯಕ್ರಮ, ಪದ್ಧತಿ, ಇವುಗಳನ್ನು ಹೇಳುವ ಶಬ್ದಗಳು.

(೩) ಕಾವ್ಯ, ಕುಶಲವಿದ್ಯೆ, ಶಾಸ್ತ್ರ, ತತ್ವ, ಉದ್ಯೋಗ ಇವಕ್ಕೆ ಸಂಬಂಧಪಟ್ಟ ಭಾವಾರ್ಥಗಳಿಗೆ ಶಬ್ದಗಳು.

ಮೂರನೆಯದು, ಈ ಶಬ್ದಗಳು ನಮಗೆ ಸಿಕ್ಕುವುದು–

(೧) ನಮ್ಮ ಜನರಿಂದಲೇ–ಅವರು ಆಗಲೇ ನಿತ್ಯದ ಬಳಕೆಗೆ ಅವನ್ನು ಸೇರಿಸಿಕೊಂಡಿದ್ದರೆ; ಇಲ್ಲದಿದ್ದರೆ,

(೨) ಪುಸ್ತಕಗಳಿಂದ, ಇಲ್ಲ, ಆ ಭಾಷೆಗಳನ್ನು ಕಲಿತ ನಮ್ಮ ವಿದ್ಯಾವಂತರಿಂದ; ಯಾಕೆಂದರೆ ಇಂಗ್ಲಿಷ್ ಜನರಿಗೂ ನಮ್ಮ ಜನಕ್ಕೂ ಶಬ್ದಗಳು ಬೆರೆಯುವಷ್ಟು ಬೆರಕೆ ಇಲ್ಲ.

(೩) ಯಾವ ಭಾಷೆಗಳಿಂದ ಅಂದರೆ ಇಂಗ್ಲಿಷ್, ಹಿಂದುಸ್ಥಾನಿ ಇವುಗಳಿಂದ.

ನಾಲ್ಕನೆಯದು, ಹೊಸ ಶಬ್ದಗಳು ಬೇಕಾದಹಾಗೆಲ್ಲಾ ಸುಮ್ಮನೆ ಸೇರಿಸಿಕೊಳ್ಳುವುದೇ ಜನರ ಸ್ವಭಾವ; ತಮ್ಮ ಭಾಷೆಯಲ್ಲೇ ಪದಗಳನ್ನು ಕೂಡಿಸಿ ಹೊಂದಿಸಿಕೊಳ್ಳುವುದು ಅಪರೂಪ. ಜನಗುಂಪಿಗೆ ಹೀಗೆ ಮಾಡುವುದಕ್ಕೆ ಬೇಕಾದ ಪ್ರಯತ್ನ, ಬುದ್ಧಿ, ಸೌಂದರ್ಯದಲ್ಲಿ ಅಭಿಮಾನ ಇವೊಂದೂ ಇರುವುದಿಲ್ಲ.

ಐದನೆಯದು, ಹೀಗೆ ಸೇರಿಸುವುದು ಸ್ವಭಾವವಾದರೂ, ಗ್ರಂಥವಿಷಯದಲ್ಲಿ ಸ್ವಭಾವವಾದ ನಡತೆಯೇ ಯಾವಾಗಲೂ ಸರಿಯೆಂದೂ, ಗುಣವೆಂದೂ ಹೇಳುವುದಕ್ಕಿಲ್ಲ; ಯಾಕೆಂದರೆ–

(೧) ಮನಸ್ಸು ಬಂದಂತೆ ಅನ್ಯಶಬ್ದಗಳನ್ನು ಗಿಡಿದರೆ, ಮಾತೃಭಾಷೆಯ ಶುದ್ಧಿಯೂ, ಸೌಂದರ್ಯವೂ ಕೆಡುತ್ತವೆ. ಗಂಗೆಯನ್ನು ಭೂಲೋಕಕ್ಕೆ ತರುವ ಉತ್ಸಾಹವಿದ್ದರೂ, ಮೊದಲು ಭಗೀರಥ ಶಿವನ ಸಹಾಯದಿಂದ ಪ್ರವಾಹವನ್ನು ಸಣ್ಣದು ಮಾಡಬೇಕಾಗಲಿಲ್ಲವೆ? ಸಂಸ್ಕೃತ ಕನ್ನಡವನ್ನು ಕೊಚ್ಚಿಹಾಕಿದ ಹಾಗೆ, ಕಟ್ಟಿಲ್ಲದೆ ಹೋದರೆ ಇಂಗ್ಲಿಷ್, ಹಿಂದುಸ್ಥಾನಿಯೂ ಕೊಚ್ಚಿಹಾಕುವುವು.

(೨) ಕೆಲವು ಶಬ್ದಗಳು ತತ್ಕಾಲಕ್ಕೆ ಸೇರಿದ್ದು ಆಮೇಲೆ ಬಿಟ್ಟುಹೋಗುತ್ತವೆ. ಅನೇಕ ಹಿಂದುಸ್ಥಾನಿ ಮಾತುಗಳು ಈಗ ಸಡಿಲಿಹೋದುವು; ಇಂಗ್ಲಿಷ್ ಮಾತುಗಳೂ ಹೋಗಬಹುದು. ಇಂತ ಶಬ್ದಗಳು ಗ್ರಂಥಕ್ಕೆ ಸೇರಿದರೆ ಮುಂದೆ ಅರ್ಥವಾಗುವುದಿಲ್ಲ; ಈ ಮುಂದಾಲೋಚನೆ ಈಗಲೇ ಇರಬೇಕು.

(೩) ಒಂದು ದೇಶಭಾಷೆಯ ಮಾತುಗಳಿಗೇ ಎಲ್ಲವೂ ಗ್ರಂಥಕ್ಕೆ ಸೇರುವ ಯೋಗ್ಯತೆ ಇರುವುದಿಲ್ಲ; ಗ್ರಾಮ್ಯ, ಪ್ರಾಂತ್ಯ, ನೀಚ, ಎಂದು ನಿಷೇಧ ಮಾಡುತ್ತೇವೆ. ಬಂದ ಹೊಸ ಶಬ್ದಗಳಿಗೆಲ್ಲಾ ಯಾಕೆ ಮಣೆಯನ್ನು ಹಾಕಬೇಕು? ಒಕ್ಕಲಿಗರನ್ನು ಹೊರಗಿರಿ ಎನ್ನುವರು ಹೊಲೆಯರನ್ನು ದೇವರಮನೆಗೆ ಬಿಡುವುದುಂಟೊ?

(೪) ಒಂದು ಕನಸಿಗೆ ಬೆಳಗಾಗಲಿಲ್ಲ; ಒಂದು ಪೆಟ್ಟಿಗೆ ವಿಗ್ರಹವಾಗಲಿಲ್ಲ; ಭಾಷೆ ಮಾತ್ರ ಒಂದು ಹೆಜ್ಜೆಗೆ ಸಂಪೂರ್ಣವಾದೀತೆ? ನಿಧಾನವಾಗಿ ಬೆಳೆಯಲಿ, ಆತುರವೇನು? ಹೊಸಮಾತುಗಳನ್ನು ನಿರ್ದಾಕ್ಷಿಣ್ಯವಾಗಿ ಪರೀಕ್ಷಿಸುತ್ತಾ, ಮೆಲ್ಲಗೆ ಒಗ್ಗಿ ಬಂದಹಾಗೆಲ್ಲಾ ಸೇರಿಸಿಕೊಳ್ಳುತ್ತಾ ಹೋಗೋಣ.

೯. ಈ ವಿಚಾರದಿಂದ ಕೆಲವು ಕಟ್ಟಳೆಗಳು ಹೊರಡುತ್ತವೆ:

(೧) ಹೊಸ ಶಬ್ದದ ಉತ್ಪತ್ತಿಯನ್ನೂ ತಾತ್ಪರ್ಯವನ್ನೂ ಮನಸ್ಸಿನಲ್ಲಿ ಬಿಡಿಸಿ ಗ್ರಹಿಸಿಕೊಂಡು, ಅದೇ ಅರ್ಥವನ್ನು ಪ್ರತಿಯೊಬ್ಬರೂ ತಮ್ಮ ಭಾಷೆಯ ಪದಗಳನ್ನು ಜೋಡಿಸುವುದರಿಂದಲೇ ತಿಳಿಸುವ ಪ್ರಯತ್ನವನ್ನು ಮಾಡಬೇಕು. ಅಂದರೆ, ವ್ಯವಹಾರದಲ್ಲಿರುವ ಕನ್ನಡ ಸಂಸ್ಕೃತ ಶಬ್ದಗಳನ್ನೇ ಕೂಡಿಸಿದರೆ ಬೇಗ ಅರ್ಥವಾಗುತ್ತದೆ; ಅಮರಕೋಶಕ್ಕೆ ಹೋಗಬಾರದು. (ಉದಾ–ಮಾಸಾಶನ, ಪ್ರಾಚ್ಯಕೋಶಾಲಯ).

ಇದಕ್ಕೆ ಎರಡು ದಾರಿಯುಂಟು:

(i) ಸಮಾಸ, ಪದಗಳನ್ನು ಕೂಡಿಸುವುದು. ಆಗಲೇ ರೂಢಿಯಲ್ಲಿರುವ ಉದಾಹರಣೆಗಳು: ಒತ್ತುವಕಾಗದ, ಗುಂಡುಸೂಜಿ, ಕಬ್ಬಿಣದ ಪೆಟ್ಟಿಗೆ, ಕಲ್ಲಿದ್ದಲು, ಉರುಳುಗಡ್ಡೆ, ಕಾಲುಚೀಲ, ಕೈವಸ್ತ್ರ, ಕೈಚೀಲ, ಕೈಮರ, ಕೀಲೆಣ್ಣೆ, ಕೀಲುಮೊಳೆ; ಕೆಂಪುಜನ, ಸೊಳ್ಳೆಯಪರದೆ, ಭೂತಗನ್ನಡಿ, ಮುಂಜುಗಡ್ಡೆ, ಕಾವ್ಯಮಾಲೆ, ಗ್ರಂಥಮಾಲೆ, ಭೂಮಿಶಾಸ್ತ್ರ, ಆಕಾಶಬುಟ್ಟಿ, ಅನಾಥಾಲಯ, ವೈದ್ಯಶಾಲೆ, ಸೀಸದಕಡ್ಡಿ, ಸೀಮೆಯೆಣ್ಣೆ, ಕೈಗಾರಿಕೆ, ಮಾಸಪತ್ರಿಕೆ, ಬೆಂಕಿಯಕಡ್ಡಿ, ದೀಪದಕಡ್ಡಿ, ಸಿಡಿಮದ್ದು

(ವಿದ್ವಾಂಸರಿಗಿಂತ ಬೀದಿಯ ಜನ ಇದನ್ನು ಒದಗಿಸಿಕೊಡುವುದು ಹೆಚ್ಚು. ಹಳ್ಳಿಯವರು ಬೈಸಿಕಲ್ಲಿಗೆ ಕಾಲುಗಾಡಿ ಎಂತಲೂ, ವಿದ್ಯುಚ್ಛಕ್ತಿ ಎಂದು ಹೇಳುವ ಬೆಳಕಿಗೆ ತಂತಿಯ ದೀಪ ಎಂತಲೂ ಹೇಳುವುದನ್ನು ಕೇಳಿದ್ದೇನೆ).

(ii)ಇರುವ ಮಾತುಗಳ ಅರ್ಥವನ್ನು ಹಿಗ್ಗಲಿಸುವುದು:

ಉದಾ-ಕಂಬಿ, ಅಚ್ಚು, ಪತ್ರ, ಪತ್ರಿಕೆ, ಮುಳ್ಳು, ತಂತಿ, ಗಂಟೆ, ಗುಂಡು, ಗುಂಡಿ, ಮದ್ದು, ಕಟ್ಟು(ಕಾಗದ), ಎಣ್ಣೆ, ಯಂತ್ರ, ಶಾಸ್ತ್ರ(ಪ್ರಕೃತಿಶಾಸ್ತ್ರ), ನಲ್ಲಿ, ಕೋಳಿ, ಸಂಘ.

(೨) ಸರಿಯಾಗಿ ಹೊಂದುವ, ಬೇಗ ಅರ್ಥವಾಗುವ ಶಬ್ದಗಳನ್ನು ಕಲ್ಪನೆಮಾಡುವುದು ಕಷ್ಟವಾದರೆ ಅನ್ಯಶಬ್ದವನ್ನೇ ಸೇರಿಸಬಹುದು. ಆದರೆ ಇದಕ್ಕೆ ಕೆಲವು ನಿರ್ಬಂಧಗಳು ಬೇಕು:

(i) ಶಬ್ದ ತೀರ ಅವಶ್ಯಕವಾಗಿರಬೇಕು; ಜನರಲ್ಲಿ ಆಗಲೆ ಸಾಮಾನ್ಯವಾಗಿ ಬಳಕೆಯಾಗಿರಬೇಕು; ಗ್ರಂಥಕ್ಕೆ ಯೋಗ್ಯವಾಗಿರಬೇಕು: ಉದಾ.-ಅಸಲು, ಅಂಬಾರಿ, ಅತ್ತರು, ಇನಾಮು, ಕರಾರು, ಜವಳಿ, ಕಾರ್ಖಾನೆ, ಖಜಾನೆ, ಗಾಡಿ, ಚಂದ, ಜಂಖಾನ, ದಿವಾನ, ಮಸೀದಿ, ರಜ, ಲಾಯ, ಸವಾರಿ; ಎಕರೆ, ಕೋರ್ಟು, ಗೆಜೆಟು, ಚಿಮ್ನಿ, ಪ್ಲೇಗು, ಬೆಂಚು, ಬ್ಯಾಂಕು, ಮೈಲಿ, ರೈಲು, ಲಾಯರು, ಕ್ಲಬ್ಬು, ಟೆನಿಸು, ಸಾಬೂನು, ಪೋಲೀಸು, ಫೋಟೋ, ಯೂನಿವರ್ಸಿಟಿ, ಡಿಗ್ರಿ, ಕಾರ್ಡು, ಕಾಫಿ, ಟೀ, ಗಿಲೀಟು, ಗಳಾಸು, ಪಿಟೀಲು, ಹೋಟಲು, ಟಿಕೀಟು.

(ii) ಇಂಗ್ಲಿಷಿಗೂ ಹಿಂದುಸ್ಥಾನಿಗೂ ಮೇಲಾಟ ಬಿದ್ದಾಗ ಹಿಂದುಸ್ಥಾನಿಯನ್ನು ತೆಗೆದುಕೊಳ್ಳಬೇಕು; ಇದು ಹಿಂದಿಯ ಮೂಲಕ ಸಂಸ್ಕೃತಕ್ಕೇ ಮುಕ್ಕಾಲು ಪಾಲು ಸೇರುತ್ತದೆ. ಆದರೆ ಹಿಂದೆ ಸೇರಿದ್ದು ಈಗ ಬಿಟ್ಟುಹೋಗುತ್ತಿರುವ ಮಾತುಗಳು ಕೂಡದು: ಉದಾ.-ಕಸಬು, ಕಚೇರಿ, ಚುನಾವಣೆ, ಇಲಾಖೆ, ಸರ್ಕಾರ, ಕಾನೂನು, ಜಮೀನು, ಜಹಗೀರು, ದಿವಾಳಿ, ಗಡಿಯಾರ, ಸೀಸೆ, ಗಿರಾಕಿ, ಬಂದೂಕ, ಕಾಗದ, ಡೇರೆ, ಇವಕ್ಕೆ ಇಂಗ್ಲಿಷ್ ಪದಗಳನ್ನು ಉಪಯೋಗಿಸಬಾರದು.

(iii) ಇಂಗ್ಲಿಷ್ ಶಬ್ದ ಸಾಧಾರಣ ಜನರ ಬಾಯಲ್ಲೂ ಆಗಲೇ ಬಂದಿರಬೇಕು; ಅಂದರೆ, ಕೇವಲ ಗ್ರಂಥದಿಂದಲೇ ತೆಗೆದದ್ದಾಗಬಾರದು, ಕೇವಲ ಭಾವಾರ್ಥಗಳನ್ನೇ ಹೇಳತಕ್ಕದ್ದಾಗಬಾರದು. ಚೆನ್ನಾಗಿ ಹರಡಿದೆ ಎನ್ನುವುದಕ್ಕೆ ಹೆಂಗಸರು ಆಡುವುದೇ ಗೊತ್ತು. ಲಿಟರೇಚರ್, ಸಬ್ಲಿಮಿಟಿ, ಪ್ರಾಪೋಸಿಷನ್, ರೆಸೊಲ್ಯೂಷನ್, ಕಂಪಲ್ಸರಿ, ಆಪ್ಷನಲ್, ಟೈಂಟೇಬಲ್, ಇನ್ಸ್ಪಿರೇಶನ್, ಟೂರ್ನಮೆಂಟ್, ಷಿವಲ್ರಿ-ಈ ಪದಗಳಿಗೆ ಸಮಾನಪದಗಳು ಸಿಕ್ಕುವುದು ಕಷ್ಟವಾದರೂ ಈ ಶಬ್ದಗಳನ್ನು ಗ್ರಂಥಕ್ಕೆ ಸೇರಿಸುವುದಕ್ಕಿಂತ ನಮ್ಮ ಭಾಷೆಯನ್ನೇ ಮೊದಲು ಬಿಟ್ಟುಬಿಡುವುದು ಮೇಲು.

(೩) ಸಾಮಾನ್ಯ ವಿಷಯಗಳನ್ನು ಕುರಿತು ಬರೆಯುವಾಗ ಹೆಚ್ಚು ಕಡಿಮೆ ಅರ್ಥಕೊಡುವ ಪದವಿದ್ದರೆ, ಜನಗಳು ಬಳಸುತ್ತಿದ್ದರೂ ಅನ್ಯಶಬ್ದವನ್ನು ಉಪಯೋಗಿಸಬಾರದು: ಉದಾ.-ಮಾರ್ಗ, ಬೀದಿ, ದಾರಿ, ರೋಡು, ರಸ್ತೆ; ವಿಧಿ, ಶಾಸನ, ನಿಯಮ, ನಿಬಂಧನೆ, ಕಟ್ಟಳೆ, ಕಟ್ಟು, ನಿರುಕು, ಲಾ, ಕಮಾಂಡ್, ಆರ್ಡರ್, ಕಾನೂನು, ಕಾಯಿದೆ, ಹುಕ್ಕುಂ; ವಿಚಾರಣೆ, ಪರೀಕ್ಷೆ, ಪರಾಮರ್ಶೆ, ಎಗ್ಸಾಮಿನೇಶನ್, ಟ್ರಯಲ್, ತನಿಖೆ; ಪತ್ರ, ಬಾಂಡು, ದಸ್ತೇವೇಜು; ಅಂಗಡಿ, ಪೇಟೆ, ಷಾಪು, ಬಜಾರು; ತೀರ್ಪು, ತೀರ್ಮಾನ, ಜಜ್‌ಮೆಂಟ್, ಫೈಸಲು; ನಾಟಕಶಾಲೆ, ಥಿಯೇಟರ್; ಮಠ, ಪಾಠಶಾಲೆ, ಸ್ಕೂಲು; ಪುಸ್ತಕ, ಬುಕ್ಕು.

(೪) ಶಾಸ್ತ್ರ, ತತ್ವ, ವೃತ್ತಿಗಳು, ಈ ವಿಷಯಗಳನ್ನು ಕುರಿತು ಬರೆಯುವಾಗ ಅನ್ಯಶಬ್ದಗಳನ್ನು ಸೇರಿಸುವುದೇ ಮೇಲು; ಇಲ್ಲಿ ಹೆಚ್ಚು ಸ್ವತಂತ್ರ ಬೇಕಾಗಿದೆ. ಆದರೆ ಇಲ್ಲಿ ಕೂಡ ಅವಶ್ಯಕವೆಷ್ಟೋ ಅಷ್ಟು ಬಿಟ್ಟು ಸ್ವೇಚ್ಛೆಯಾಗಿ ಹೋಗಬಾರದು.

೧೦. ಒಟ್ಟೇನಾಯಿತು, ವಿದ್ಯಾರ್ಥಿಗಳು ಅತಿಪಾಂಡಿತ್ಯಕ್ಕೆ ಹೋಗುವ ಗ್ರಂಥಶಬ್ದಗಳನ್ನು ಬಿಡಬೇಕು, ಹೊಸಭಾವಗಳನ್ನು ಬಿಡಿಸಿಕೊಂಡು ತಕ್ಕ ಹಾಗೆ ತಮ್ಮ ಭಾಷೆಯಲ್ಲೇ ಕೂಡಿಸುವುದಕ್ಕಾಗಲಾರದೇ ಎಂದು ನಿಜವಾದ ಪ್ರಯತ್ನ ಮಾಡಿ ನೋಡಿ, ಸಾಗದೆ ಹೋದರೆ, ಆಗ ಕೇವಲ ಅವಶ್ಯಕವಾದ , ಸಾಮಾನ್ಯವಾಗಿ ಅರ್ಥವಾಗುವ, ಹಿಂದುಸ್ಥಾನಿ, ಇಂಗ್ಲಿಷ್ ಶಬ್ದಗಳನ್ನು ಮಾತ್ರ ಸೇರಿಸಬೇಕು; ವಿಶೇಷಜ್ಞಾನ ವಿಷಯಗಳಲ್ಲಿ ಹೆಚ್ಚು ಸ್ವತಂತ್ರವನ್ನು ವಹಿಸಬಹುದು. ಅರೋಗ್ಯವಾಗಿಯೂ, ಬಲವಾಗಿಯೂ ಇರಬೇಕಾದರೆ ಮನುಷ್ಯ, ತನ್ನ ಅಂಗಗಳನ್ನೂ ಬುದ್ಧಿಯನ್ನೂ ಸರಿಯಾಗಿ ಸಾಧನೆ ಮಾಡುವುದರಿಂದ ಆದೀತೇ ಹೊರತು, ಮುದುರಿಕೊಂಡು ಮಲಗಿ, ತನ್ನ ಪ್ರಕೃತಿಗೆ ವಿರೋಧವಾದ ಔಷಧವನ್ನೂ ಲೇಹ್ಯವನ್ನೂ ನುಂಗುವುದರಿಂದ ಅಷ್ಟು ಆಗುವುದಿಲ್ಲ: ಭಾಷೆಯ ಪಾಡೂ ಹೀಗೇ ಎಂದು ಚೆನ್ನಾಗಿ ನೆನಪಿನಲ್ಲಿಡಬೇಕು.

೩.ವ್ಯಾಕರಣ

೧೧. ವ್ಯಾಕರಣ ವಿಷಯ ಸಾಮಾನ್ಯ ವಿಧಿಗಳ ಕೆಳಗೇ ಸ್ವಲ್ಪ ಮಟ್ಟಿಗೆ ಹೇಳಿರುತ್ತದೆ. ಇಲ್ಲಿ ಮುಖ್ಯವಾಗಿ ಸಂಧಿ, ವಿಭಕ್ತಿ, ಹೊಸ ಕ್ರಿಯಾರೂಪಗಳು, ಕರ್ಮಣಿಪ್ರಯೋಗ-ಇವುಗಳ ವಿಚಾರದಲ್ಲಿ ಎಲ್ಲರೂ ಬಲ್ಲ ಭಾಗಕ್ಕೆ ಹೋಗದೆ, ಬಿಡಬೇಕಾದ ಹಿಂದಿನ ರೂಪಗಳಿಗೇ ಹೆಚ್ಚು ಗಮನಕೊಟ್ಟು ಕೊಂಚ ಪ್ರಸ್ತಾಪ ಮಾಡುತ್ತದೆ.

೧೨. ಸಂಧಿ: ವ್ಯಾಕವೆಲ್ಲಾ ಒಂದು ಜಡೆಬತ್ತಿಯಾಗಿ ಹೊಸೆದುಕೊಳ್ಳದೆ ಹಾಗೆ ನೋಡಿಕೊಂಡು, ಮಾತಾಡುವಾಗ ಕೂಡಿಸುವುದಕ್ಕಿಂತ ಹೆಚ್ಚು ಸಂಧಿಗೆ ಹೋಗಬಾರದು. ನಕಾರ ವಕಾರಾಗಮಗಳನ್ನು ಗ್ರಾಮ್ಯವೆಂದು ಗಣಿಸಿಬಿಟ್ಟು, ಲಕಾರಾಗಮವನ್ನು ಒಪ್ಪಿಕೊಳ್ಳಬಹುದು. ಉದಾ.–ಅವನೇನೆ, ಒಬ್ಬನೇನೆ, ಅದೇವೆ, ಅವಳೇವೆ; ಅದರಿಂದಲೇ, ಕೊಡುತ್ತಲೇ, ಯಾರಿಂದಲೂ.

೧೩. ವಿಭಕ್ತಿಗಳು:

(೧) ಪ್ರಥಮೆಗೆ: ಪ್ರಕೃತಿರೂಪವೇ ಸರಿ. ಮರ, ಆಟ, ಉಪದೇಶ, ಕುರಿ, ಉಪಕಾರಿ, ಕರು, ಮರೆ, ಕುಶಲವಿದ್ಯೆ. ಇದಕ್ಕೆ ಹಿಂದಿನ ಗ್ರಂಥದಲ್ಲಿ ಪ್ರಮಾಣ ಇದೆ. ಮರವು, ಕುರಿಯು, ಕುಶಲವಿದ್ಯೆಯು, ಉಪದೇಶವು ಎಂದು ಯಾರೂ ಹೇಳುವುದಿಲ್ಲ.

(೨) ದ್ವಿತೀಯೆಗೆ: ಅನ್ನು, ಅನ್ನ, ಈ ಎರಡು ಪ್ರತ್ಯಯಗಳನ್ನೂ ಒಪ್ಪಬಹುದು. ಕ್ರಿಯೆಗೆ ಮುಂದೆ ದ್ವಿತೀಯೆ ಬಂದಾಗ–ಅನ್ನ ಎನ್ನುವುದೇ ಕೇಳುವುದಕ್ಕೆ ಹಿತವಾಗಿರುತ್ತದೆ: ಉದಾ.–"ನೋಡಯ್ಯ, ಲಕ್ಷ್ಮಣ, ಕಾಲಿನಿಂದ ಬಸಿಯುತ್ತಿರುವ ರಕ್ತವನ್ನು."ಇಲ್ಲಿ ರಕ್ತವನ್ನು ಅಂದರೆ ಏನೋ ವಿಕಾರವಾಗಿ ಕೇಳಿಸುತ್ತದೆ.

(೩) ಪಂಚಮಿ ಕನ್ನಡದಲ್ಲಿ ಇಲ್ಲ. ಸಂಸ್ಕೃತದ ಮರಿ ಕನ್ನಡ ಎಂದು ಭ್ರಮಿಸಿರುವ ದೆಸೆಯಿಂದ ಇದು ವ್ಯಾಕರಣಗಳಲ್ಲಿ ಸೇರಿದೆ.

(೪) ಷಷ್ಠಿಯಲ್ಲಿ ಎರಡು ರೂಪ ಉಂಟು. ನಾಮಪದಕ್ಕೆ ಹಿಂದೆ–ಅ: ನನ್ನ ಮನೆ, ಗಿಣಿಯ ರೆಕ್ಕೆ, ಮರದ ಬಾಗಿಲು; ಮುಂದೆ ಬಂದರೆ,–ಅದು,–ಅದ್ದು: ಮನೆ ನನ್ನದು, ರೆಕ್ಕೆ ಗಿಣಿಯದು, ಬಾಗಿಲು ಮರದ್ದು, ಹಾಳೆ ಪುಸ್ತಕದ್ದು, ಕೊಡತಿ ಕಬ್ಬಿಣದ್ದು. ಮರದದು, ಪುಸ್ತಕದದು, ಕಬ್ಬಿಣದದು ಎಂದು ಯಾರೂ ಬರೆಯಲಾರರು.

೧೪. ಹೊಸ ಕ್ರಿಯಾರೂಪಗಳು:

(೧) ಅಖ್ಯಾತ: ಕನ್ನಡದಲ್ಲಿ ಇರುವುದು ವರ್ತಮಾನ ಭವಿಷ್ಯತ್ತು ಎರಡು ಕಾಲಕ್ಕೂ ಒಂದು ರೂಪ, ಭೂತಕಾಲಕ್ಕೆ ಒಂದು ರೂಪ, –ಎರಡೇ; ಮೂರಿಲ್ಲ.

ಭೂತಕಾಲದಲ್ಲಿ ನಾನು ಬಂದೆ, ಅದನು ಬಂದ, ಎಂದು ಎಲ್ಲರೂ ಆಡುವಹಾಗೆ ಯಾಕೆ ಬರೆಯಕೂಡದು? ವರ್ತಮಾನ ಭವಿಷ್ಯತ್ತಿನಲ್ಲಿ ಹೊಸರೂಪಗಳೇ ಸರಿ: ಬರುತ್ತೇನೆ, ಬರುತ್ತದೆ, ಮೊದಲಾದುವು. ಹಿಂದಿನ ರೂಪಗಳಾದ ಬರುವನು ಮೊದಲಾದ ಪ್ರಥಮಪುರುಷ ರೂಪಗಳನ್ನು ಸಾಧಾರಣವಾಗಿ ಹೊಸಗನ್ನಡದಲ್ಲಿ ಕೃನ್ನಾಮವಾಗಿಯೂ ಕೆಲವು ವೇಳೆ ಭೂತಸಂಭಾವನೆಗೂ ಉಪಯೋಗಿಸುತ್ತಾರೆ; ಹಿಂದಿನಂತೆ ಅಖ್ಯಾತವಾಗಿ ಯಾರೂ ಉಪಯೋಗಿಸುವುದಿಲ್ಲ. ಸಾಮಾನ್ಯವಿಧಿಗಳಲ್ಲಿ ಹೇಳಿದಂತೆ ಗ್ರಂಥಭಾಷೆ ಆಡುವ ಭಾಷೆಯ ಛಾಯೆಯಾಗಬೇಕಾದರೆ ಇವನ್ನು ಆ ರೀತಿ ಅಖ್ಯಾತವಾಗಿ ಬರೆಯಕೂಡದಲ್ಲವೆ? ಹಿಂದಿನ ಉತ್ತಮ ಮಧ್ಯಮಪುರುಷರೂಪಗಳು ಈಗ ಇಲ್ಲವೇ ಇಲ್ಲ. ವರ್ತಮಾನ ಭವಿಷ್ಯತ್ತಿನ ಸಂಭಾವನೆಗೂ, ನಿಷೇಧಕ್ಕೂ, ಹೊಸರೂಪಗಳು: ಬಂದಾನು, ಮಾಡಾನು; ಬರಲಿಲ್ಲ, ಬರುವುದಿಲ್ಲ. ಸರಿಯಾದ ಸಂದರ್ಭಗಳಲ್ಲಿ, ಗಾದೆಗಳಲ್ಲಿ, ಹೇಳ, ಕೇಳ, ಕೊಡ, ಮೊದಲಾದ ಹಿಂದಿನ ರೂಪಗಳು. ಈ ರೂಪ ಮಧ್ಯಮಪುರುಷ ಬಹುವಚನದಲ್ಲಿ ವಿಧಿರೂಪದೊಡನೆ ಭ್ರಮೆಯಾಗುತ್ತದೆ(ಕಳೆಯಿರಿ, ಕೇಳಿರಿ).

(೨) ವಿಧಿ: ಉತ್ತಮಪುರುಷ ಬಹುವಚನಕ್ಕೆ –ಉವ, ಗ್ರಾಮ್ಯ–ಉವಣ, ಪಾಂಡಿತ್ಯ–ಓಣ, ಸರಿ: ನಡೆಯುವ, ನಡೆಯುವಣ, ನಡೆಯೋಣ, ಮಧ್ಯಮ ಪುರುಷ ಏಕವಚನ– ಧಾತುವೇ. (ಇಲ್ಲಿ ಜನರು ಆಡುವಂತೆ ಭಾಷೆಯ ಉಚ್ಚಾರಣೆಯ ವಿಧಿಗೆ ಅನುಸಾರವಾಗಿ, ಎಕಾರಾಂತವನ್ನು ಇಕಾರಾಂತವಾಗಿ ಬರೆಯಕೂಡದೆ?–ಮರಿ, ತೆಗಿ, ಜರಿ, ಹೊಡಿ, ನಡಿ). ಬಹುವಚನ–ಇರಿ: ಆದಕಡೆ–ಇ; ಬನ್ನಿ, ಬನ್ನಿರಿ: ಕೇಳಿ, ಕೇಳಿರಿ; ಹೊಡೆಯಿರಿ, ತಿವಿಯಿರಿ.

(೩) ಅವ್ಯಯಕೃದಂತ: ಅಲು,–ಅಲಿಕ್ಕೆ ಇವು ರೂಢಿಯಲ್ಲಿಲ್ಲ. ಇದ್ದರೂ, ಗ್ರಾಮ್ಯ; ಹೊಸರೂಪಗಳನ್ನೇ ಬರೆಯಬೇಕು. ಉದಾ.–ಬರುತ್ತಲು, ಬರುವುದಕ್ಕೆ, ಬರುವುದೂ, ಬರಲಾಗಿ, ಬರ(ಗೊಡಿಸು).

(೪) ಕೃನ್ನಾಮ: ಹಿಂದಿನ ಅಖ್ಯಾತದ ಪ್ರಥಮಪುರುಷ ರೂಪಗಳು.–ಅವ,–ಉವ ಈ ಪ್ರತ್ಯಯಗಳೂ ಉಂಟು: ಬಂದವಳು, ಬರುವವನು, ಕಳೆಯುವುದು(ಕಳೆವುದು, ತಪ್ಪು). ನಪುಂಸಕ ಏಕವಚನದಲ್ಲಿ–ಉದು, ಹಿಂದಿನ ರೂಪ; ಅದ್ದು, ಈ ಹೊಸರೂಪವನ್ನೇ ಬರೆಯಬೇಕು. ಬಂದದ್ದು, ಕಳೆದದ್ದು, ಕಾಣದ್ದು, ಹೇಳಿದ್ದು.

೧೫. ಕರ್ಮಣಿ ಪ್ರಯೋಗ: ವಾಕ್ಯರಚನೆ ಕನ್ನಡದ ರೂಢಿಯನ್ನು ಮೀರಬಾರದೆಂದು ಹೇಳಬೇಕಾಗಿಯೇ ಇಲ್ಲ. ಇಂಗ್ಲಿಷ್ ಮಾದರಿ ಬೆರೆಯದ ಹಾಗೆ ವಿದ್ಯಾರ್ಥಿಗಳು ಎಚ್ಚರವಾಗಿರಬೇಕು.– ಅದು ಸುಳ್ಳು ಎಂದು ಹೇಳುವಷ್ಟು ಯಾರೂ ಧೈರ್ಯಶಾಲಿಯಾಗಲಿಲ್ಲ, ನಿಮ್ಮನ್ನು ಕಾಣುವುದಕ್ಕೆ ನನಗೆ ತುಂಬ ಸಂತೋಷವಾಗಿದೆ, ಅವನು ಐಶ್ವರ್ಯವನ್ನು ಉಂಟಾಗಿದ್ದಾನೆ, ನಾನು ಒಂದು ಬಟ್ಟಲನ್ನು ಹೊಂದಿದ್ದೇನೆ–ಇವೆಲ್ಲಾ ನಾಚಿಕೆಗೇಡಾದ ಬರವಣಿಗೆ.

ಇದಕ್ಕಿಂತ ಸಾಧಾರಣವಾಗಿ ಎಲ್ಲರೂ ಕನ್ನಡದ ರೂಢಿಯನ್ನು ಧಿಕ್ಕರಿಸುವುದು ಕರ್ಮಣಿ ಪ್ರಯೋಗದಿಂದ. ಇದು ಪುಸ್ತಕಗಳಲ್ಲಿ ಎಲ್ಲೆಲ್ಲಿಯೂ ಸಿಕ್ಕುತ್ತದೆ; ಜನರ ಬಾಯಲ್ಲಿ ಎಲ್ಲೂ ಇಲ್ಲ. ಕೇಶಿರಾಜ ನಾಗವರ್ಮ ಇವರ ಕಾಲದಲ್ಲೇ ಇದು ಇದ್ದ ಹಾಗೆ ಕಾಣುತ್ತದೆ; ಈಚೆಗೆ ಎಂಟುನೂರು ವರುಷವಾಯಿತು; ಇದುವರೆಗೂ ಪುಸ್ತಕದಲ್ಲಿ ಎಷ್ಟು ಓದಿದರೂ ಜನರು ಇದನ್ನು ಕಲಿಯಲಿಲ್ಲ. ನಾವೂ ಜನರ ಜೊತೆಗೆ ಚಂಡಿ ಹಿಡಿಯುವುದೇ ನ್ಯಾಯವಲ್ಲವೆ? ಇದೇ ಅರ್ಥವನ್ನು ಕನ್ನಡದಲ್ಲಿ ಬೇರೆ ವಿಧವಾಗಿ ಜನರು ಹೇಳಿಯೇ ಹೇಳುತ್ತಾರೆ:– ಅವನು ಸಂತೋಷಪಟ್ಟನು; ಅವನಿಗೆ ಸುಖವಾಯಿತು; ಅವನು ಇವನಿಂದ ನೂಕಿಸಿಕೊಂಡನು; ಪೆಟ್ಟು ತಿಂದನು. ನಾಚಿಕೆಪಟ್ಟನು; ಪುಸ್ತಕ ಕಳದುಹೋಯಿತು; ಇದೇ ನಾನು ಕಟ್ಟಿದ ಮನೆ; ಅವನು ಮಾರಿದ ಪುಸ್ತಕ ಇದೇ; ಮಲಗುವ ಮನೆ: ಕೆಡುವ ಬುದ್ಧಿ. ಕನ್ನಡದ ಮಾತನ್ನು ಆಡುವ ಜನರ ಮನಸ್ಸಿಗೆ ಈ ಕರ್ಮಣಿರೂಪ ಹಿಡಿಯುವುದಿಲ್ಲ; ಇದು ನಮಗೆ ಒಗ್ಗುವುದಿಲ್ಲ; ಇದನ್ನು ಬಿಡುವುದೇ ಉತ್ತಮ.

೧೬. ಈ ನಿಯಮಗಳನ್ನು ವಿದ್ಯಾರ್ಥಿಗಳಿಗೆ ಅನುಕೂಲವಾದೀತೆಂದು ಬರೆದಿದೆ. ಗ್ರಂಥಕರ್ತರು ವಚನದಲ್ಲಿ ಬರೆಯುವಾಗ ಇವುಗಳನ್ನು ಒಪ್ಪಿಕೊಳ್ಳುವುದಾದರೆ ಜನಸಾಮಾನ್ಯಕ್ಕೆ ಉತ್ತಮವೇ. ಆದರೂ ಸ್ವತಂತ್ರರಾದ ಗ್ರಂಥಕರ್ತರಿಗೆ ಮೇಲುಪಂಕ್ತಿಯನ್ನು ಹಾಕುವ ಧೈರ್ಯ ಯಾರಿಗಿದೆ? ಅದರಲ್ಲೂ ಮಹಾಕವಿಗಳಿಗೆ ಬುದ್ಧಿ ಹೇಳುವವರು ಯಾರು? ಭಾಷೆ ಇದೆ, ನಿಮ್ಮಲ್ಲಿ ಶಕ್ತಿ ಇದೆ: ಬರೆಯಿರಿ. ಓದುವುದು ನಮ್ಮಂತ ಸಾಮಾನ್ಯ ಜನದ ಕೈಯಲ್ಲೇ ಇದೆ. ಖಂಡಿತ ಹೇಳುತ್ತೇವೆ, ಕವಿತ್ವದ ಮೇಲೆ ಕವಿತ್ವವಾಗಿ ನಮಗೆ ಅಜೀರ್ಣವಾಗಿದೆ, ಲಂಘನವೇ ಗುಣವೆಂದು ನಂಬಿದ್ದೇವೆ. ಪಾಂಡಿತ್ಯದ ಮೇಲೆ ಪಾಂಡಿತ್ಯವಾಗಿ ರೋಸಿಹೋಗಿದ್ದೇವೆ; ನಾವು ಬಡವರು, ನಿಮ್ಮ ಕಾಡುಕಗ್ಗಕ್ಕೆ ದುಡ್ಡು ಹಾಕುವುದಿಲ್ಲ. ನಾವು ಆಡುವ ಮಾತು, ನಾವು ಮೆಚ್ಚುವ ವಿಷಯ, ನಾವು ಏಳಿಗೆಯಾಗುವ ದಾರಿ: ಇದಕ್ಕೆ ನೀವು ಬರುವವರೆಗೂ ನಮಗೂ ನಿಮಗೂ ಗಂಟಿಲ್ಲ: ಎಚ್ಚರವಿರಲಿ. ಮೊನ್ನೆ ಈ ಕನ್ನಡವನ್ನು ಎಲ್ಲೋ ನೋಡಿದೆವು: ಇದು ಯಾವ ದೇವರಿಗೆ ಸೆಲಹೇಳಿ:–

"ಶರತ್ಕಾಲದ ಪರಿಷ್ಕೃತವಾದ ಆಕಾಶದಲ್ಲಿ ದೃಷ್ಟಿನಿಕ್ಷೇಪವನ್ನು ಮಾಡಿದುದಾದರೆ, ಆ ಅಗಣ್ಯವಾದ ತಾರಾಪುಂಜದ ಮಧ್ಯೇ ಮಧ್ಯೇ, ಶ್ವೇತನೀಹಾರದಂತೆ, ಅವುದೋ ಒಂದು ಪದಾರ್ಥವು ಅಸ್ಪಷ್ಟವಾಗಿ ಆಗಾಗ ನೇತ್ರವಿಷಯವಾಗುವುದುಂಟು. ದೂರವೀಕ್ಷಣ ಯಂತ್ರ(Telescope)ದ ಪರೀಕ್ಷೆಯಿಂದ ಅ ಪದಾರ್ಥವು ಇನ್ನಷ್ಟು ಪರಿಸ್ಫುಟವಾಗಬಲ್ಲುದು. ಅದೆಲ್ಲವೂ ಇನ್ನೇನೂ ಅಲ್ಲ:–ಕೇವಲ ಸೃಷ್ಟಿಕಾರ್ಯದ ಸಂಚಿತಸಾಮಗ್ರಿ! ಅತಏವ, ಆ ಸಾಮಗ್ರಿಯಿಂದ, ಪೃಥಿವಿಯಾಗಲಿ, ಸೌರಜಗತ್ತಾಗಲಿ, ಇನ್ನೂ ನಿರ್ಮಾಣ ಮಾಡಲ್ಪಟ್ಟಿಲ್ಲ!! ನೀಹಾರ(Mist)ದಂತೆ ತೋರುವುದೆಂದು ನೀಹಾರಿಕೆ (Nebuloe)ಯೆನ್ನುತ್ತಾರೆ!!!"

ನಿಜ; ಕವಿಯ ಸೃಷ್ಟಿಕಾರ್ಯಕ್ಕೆ ಭಾಷೆಯೇ ಸಾಮಗ್ರಿ; ಅದರೆ ಅದರಿಂದ ಸ್ಪಷ್ಟವಾದ ಸುಂದರವಾದ ಜಗತ್ತನ್ನು ನಿರ್ಮಾಣಮಾಡುವವರೆಗೂ, ನಿಮ್ಮ ಮಾತೆಲ್ಲ ಮಂಜಿನ ಮಬ್ಬೇ.